'ಊಟ ರೆಡಿ ಇದೆ.'

'ಮೊದಲು ಈ ಅಪೆಟೈಸರ್. ಹತ್ತು ನಿಮಿಷ ಬಿಟ್ಟು ಊಟ!'

★★★

ರವಿ ಗೋವಾದ ಕಲನ್‌ಗುಂಟೆ ಬೀಚಿನಲ್ಲಿದ್ದಾಗ ಬೆಳಗ್ಗೆ ಹತ್ತು ಗಂಟೆಯ ಸಮಯದಲ್ಲಿ ಮೊಬೈಲ್ ರಿಂಗಣಿಸಿತು. ಎತ್ತಿಕೊಂಡ.

'ನಿಮ್ಮ ತಂದೆ ತಾಯಿ ತುಂಬ ಸೀರಿಯಸ್, ಬೇಗ ಹೊರಟು ಬನ್ನಿ...' ಕಾರ್ಯದರ್ಶಿಯ ಧ್ವನಿ.

'ಹಲೋ ಏನಾಯ್ತು... ಯಾಕೆ...' ಎನ್ನುತ್ತಿರುವಂತೆಯೇ ಬ್ಯಾಟರಿ ಲೋ ಆಗಿ ಮೊಬೈಲ್ ಸ್ತಬ್ಧವಾಯಿತು. ಹೋ... ಛಾರ್ಜರ್ ಬೇರೆ ತಂದಿಲ್ಲ. ಏನಾಯ್ತು ಇದು? ಹತ್ತಿರದ ಬೂತ್‌ಗೆ ಹೋಗಿ ಮನೆಗೆ ಫೋನ್ ಮಾಡಿದ. ಯಾರೂ ಎತ್ತಲಿಲ್ಲ. ತತ್‌ಕ್ಷಣ ಹೋಟೆಲ್‌ಗೆ ಹಿಂತಿರುಗಿ ವಿಮಾನದ ಟಿಕೆಟ್ ಖಚಿತಪಡಿಸಿಕೊಂಡು ವಿಮಾನ ನಿಲ್ದಾಣಕ್ಕೆ ಧಾವಿಸಿದ.

ಬೆಂಗಳೂರು ವಿಮಾನ ನಿಲ್ದಾಣದಿಂದ ಟ್ಯಾಕ್ಸಿಯಲ್ಲಿ ಮನೆಗೆ ಧಾವಿಸುವಾಗ ಟ್ರಾಫಿಕ್ ಸಿಗ್ನಲ್ ಬಳಿ ಪತ್ರಿಕೆ ಮಾರುವ ಹುಡುಗ ಕೂಗುತ್ತಿದ್ದ: 'ತಾಜಾ ಸುದ್ದಿ... ಗೃಹಮಂತ್ರಿ ಮತ್ತು ಪತ್ನಿ ನಿಗೂಢ ಸಾವು. ಕೊಲೆಯೋ ಆತ್ಮಹತ್ಯೆಯೋ?' ರವಿ ಒಂದು ಪ್ರತಿಕೊಂಡು ಸರಸರ ಓದಲಾರಂಭಿಸಿದ. ಕೋಮುಗಲಭೆ ಪರಿಸ್ಥಿತಿಯನ್ನು ಸರಿಯಾಗಿ ನಿಭಾಯಿಸಲಿಲ್ಲವಾದ್ದರಿಂದ ಸಂಪುಟದಿಂದ ಕೈಬಿಡುವ ಗುಮಾನಿ ಇದ್ದುದರಿಂದ ಗೃಹಮಂತ್ರಿಗಳು ಆತ್ಮಹತ್ಯೆ ಮಾಡಿಕೊಂಡರೆ? ವೈದ್ಯಕೀಯ ಪರೀಕ್ಷೆಯಲ್ಲಿ ಮಾವಿನಹಣ್ಣಿನ ರಸದ ಜೊತೆಯಲ್ಲಿ ನಿದ್ರಾಮಾತ್ರೆ ಸೇವಿಸಿ ಕೋಮಾಕ್ಕೆ ಹೋದವರು ಮತ್ತೆ ಎಚ್ಚರಗೊಳ್ಳಲಿಲ್ಲ ಎಂದು ವರದಿಯಾಗಿತ್ತು. ರವಿಗೆ ಕಣ್ಣು ಕತ್ತಲೆಗುಟ್ಟಿತು.

★★★

ಮಾವಿನಹಣ್ಣಿನ ರಸದ ಬಾಟಲು ಅವರ ಕೈಗೆ ಹೇಗೆ ಬಂತು ಎಂದು ತನಿಖೆ ಆರಂಭವಾಯಿತು. ತನಿಖಾ ತಂಡ ಶೋಧನೆ ಮಾಡುತ್ತಾ ಬಂದಾಗ ಕೊನೆಯಲ್ಲಿ ಪಾರ್ಕಿನ ಭಿಕ್ಷುಕನ ಬಳಿ ಬಂದು ನಿಂತಿತು.

'ಇಲ್ಲಿಗೆ ನೂರಾರು ಜನ ಬರ್ತಾರೆ ಸ್ವಾಮಿ. ಯಾರು ಅಂತ ನಾನು ಗುರುತು ಹಿಡೀಲಿ?' ಎಂದು ಭಿಕ್ಷುಕ ರವಿಯ ಕಡೆ ನೋಡುತ್ತಾ ಹೇಳಿದ.

## ಈಶ್ವರಚಂದ್ರ

ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಹೋದಿಗೆರೆಯವರು. ಚನ್ನಗಿರಿ, ಸಾಗರ, ಶಿವಮೊಗ್ಗ, ಭದ್ರಾವತಿಯಲ್ಲಿ ವಿದ್ಯಾಭ್ಯಾಸ. ಉದ್ಯೋಗ ಮಾಡಿದ್ದು ಬೆಂಗಳೂರು ವಿಮಾನ ಕಾರ್ಖಾನೆಯ 'ವಿಮಾನ ಸಂಶೋಧನೆ ಮತ್ತು ವಿನ್ಯಾಸ' ಕೇಂದ್ರದಲ್ಲಿ. ಸೇವೆಯಿಂದ ನಿವೃತ್ತರಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ಕಥಾಸಂಗಮ' ಸಿನಿಮಾದ ಮೂರು ಕತೆಗಳಲ್ಲಿ ಇವರ 'ಮುನಿತಾಯಿ' ಕತೆಯೂ ಒಂದು. ಅವರ 'ಹಬ್ಬಿದಾಮಲೆ ಮಧ್ಯದೊಳಗೆ' ಕತೆ 'ಕಾಡಿಗೆ ಹೋದವರು' ಎಂಬ ಹೆಸರಿನಲ್ಲಿ ಸಿನಿಮಾ ಆಗಿದೆ. 'ರಾತ್ರಿರಾಣಿ', 'ತೀರ', 'ಗುಂಪಿನಲ್ಲಿ ಕಂಡ ಮುಖ', 'ಮುನಿತಾಯಿ', 'ಕತ್ತಲಗರ್ಭ', 'ಅದ್ವಿತೀಯ' ಅವರ ಕಥಾಸಂಗ್ರಹಗಳಾದರೆ, 'ಒಂದೇ ಸೂರಿನ ಕೆಳಗೆ', 'ಸಿಮೆಂಟ್ ಮನುಷ್ಯರು' ಅವರ ಕಾದಂಬರಿಗಳು.